# ಕಲ್ಕತ್ತೆಯ 'ಉದ್ಬೋಧನ'ದಲ್ಲಿ ಶ್ರೀಮಾತೆಯವರ ಪ್ರಥಮಭೇಟಿ

ಮೂಲ ಬಂಗಾಳಿ : **ಸರಯೂ ರಾಯ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



**ಅ**ದು ಯಾವ ತಿಂಗಳು, ಯಾವ ದಿನಾಂಕ ಎಂಬುದೊಂದೂ ಈಗ ನನಗೆ ನೆನಪಿಲ್ಲ. ಬಹುಶಃ ಬಂಗಾಳಿ ವರ್ಷ ೧೩೨೯ (ಕ್ರಿ.ಶ. ೧೯೧೩) ಇರಬಹುದು. ಆಗ ನನಗೆ ಒಂಬತ್ತು-ಹತ್ತು ವರ್ಷ ಇದ್ದಿರಬೇಕು. ಹಾಗಿದ್ದರೂ, ಶ್ರೀಮಾತೆ ನನ್ನನ್ನು ಸ್ನೇಹದ ಸ್ಪರ್ಶ ದಿಂದ ಹಾಗೂ ಕೃಪೆಗೈಯುವ ಮೂಲಕ ನನ್ನನ್ನು ಧನ್ಯ, ಕೃತಾರ್ಥ ಗೊಳಿಸಿದ ಆ ದಿನ ಇಂದೂ ನನ್ನ ನೆನಪಿನಲ್ಲಿ ಉಜ್ವಲವಾಗಿ ಬೆಳಗುತ್ತಿದೆ.

ನಾನು ಮಗುವಾಗಿದ್ದಾಗಲೇ ನನ್ನ ಮನೆಯಲ್ಲಿದ್ದ ಶಿಕ್ಷಕರ ಕಾರಣದಿಂದಾಗಿ ನನಗೆ ಶ್ರೀರಾಮಕೃಷ್ಣರ ಮೇಲೆ ವಿಶೇಷ ಪ್ರೀತಿ ಉಂಟಾಗಿತ್ತು. ಅವರು 'ಉದ್ಬೋಧನ' ಪತ್ರಿಕೆಯಿಂದಲೂ, ಶ್ರೀರಾಮಕೃಷ್ಣರನ್ನು ಕುರಿತ ಇತರ ಪುಸ್ತಕಗಳಿಂದಲೂ ಅವರ ಕಥೆಗಳನ್ನು ನಮಗೆ ಹೇಳುತ್ತಿದ್ದರು. ಯಾಕೋ ಗೊತ್ತಿಲ್ಲ , ಅದನ್ನು ಕೇಳುವಾಗ ನಮಗೆ ಆನಂದವಾಗುತ್ತಿತ್ತು. ಆ ವಯಸ್ಸಿನಲ್ಲಿ ಓದು, ಬರಹಕ್ಕಿಂತ ಅವರ ಮಾತುಗಳನ್ನು ಕೇಳುವುದೇ ನನಗೆ ಹೆಚ್ಚು ಆಕರ್ಷಕವೆನಿಸಿತ್ತು. ಇದಕ್ಕೂ ಮೊದಲು ನನ್ನ ಅಜ್ಜ ಜಗಬಂಧು ಸೇನ್ ಶ್ರೀರಾಮಕೃಷ್ಣರ ದರ್ಶನ ಪಡೆಯುವ ಹಾಗೂ ಅವರೊಂದಿಗೆ ಒಡನಾಡುವ ಸೌಭಾಗ್ಯವನ್ನು ಪಡೆದಿದ್ದರು. ಅವರು ಬ್ರಾಹ್ಮೋ ಸಮಾಜದಲ್ಲಿ ಕೇಶವಚಂದ್ರ ಸೇನನ ಅನುಯಾಯಿಯಾಗಿದ್ದರು. ಈ ಕಾರಣದಿಂದಲೇ ಕೇಶವಚಂದ್ರರೊಡನೆ ಶ್ರೀರಾಮಕೃಷ್ಣರು ನೌಕಾವಿಹಾರ ಮಾಡಿದಾಗ, ಅಲ್ಲಿದ್ದ ಭಕ್ತರೊಂದಿಗೆ ನನ್ನ ಅಜ್ಜ ಕೂಡ ಇದ್ದರು. ಅವರ ಪ್ರಭಾವದಿಂದ ನಮ್ಮ ಕುಟುಂಬದಲ್ಲಿ ಶ್ರೀರಾಮಕೃಷ್ಣರ ಬಗ್ಗೆ ವಿಶೇಷ ಪ್ರಭಾವವುಂಟಾಗಿತ್ತು. ನನ್ನ ಅಜ್ಜಿ ಯೋಗಮಾಯಾ ದೇವಿಗೆ ಗಂಗಾಸ್ನಾನ ಮಾಡುವ ಅಭ್ಯಾಸವಿತ್ತು. ನನ್ನ ತವರುಮನೆಯಾದ ಚಂಪಾತಲಾ (ಶಿಯಾಲ್‌ದಹ) ದಿಂದ ಅವರು ಹೆಚ್ಚಾಗಿ ಬಾಗ್‌ಬಾಜಾರ್ ಸ್ನಾನಘಟ್ಟಕ್ಕೆ ಸ್ನಾನ ಮಾಡಲು ಹೋಗುತ್ತಿದ್ದರು. ಸಾಧ್ಯವಾದಾಗಲೆಲ್ಲ ಅವರು ಮರಳಿ ಬರುವಾಗ 'ಉದ್ಬೋಧನ'ಕ್ಕೆ ಹೋಗಿ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಬರುತ್ತಿದ್ದರು. ನಡುನಡುವೆ ನಾನು ಅವರೊಂದಿಗೆ ಹೋಗುತ್ತಿದ್ದರೂ, ನನಗಿನ್ನೂ ಚಿಕ್ಕವಯಸ್ಸು ಎಂಬ ಕಾರಣದಿಂದಲೂ, ಮನೆಗೆ ಹಿಂದಿರುಗಿ ಬರುವುದು ತಡವಾದೀತು ಎಂದೂ, ನನ್ನನ್ನು ಅಲ್ಲಿಗೆ ಕರೆದು ಕೊಂಡು ಹೋಗುತ್ತಿರಲಿಲ್ಲ. ಒಂದು ಬಾರಿ ನಾನು ಹಟ ಮಾಡಿದ್ದರಿಂದ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಬೇಕಾಯಿತು. ಅದು ನನ್ನ ಜೀವನದ ಅವಿಸ್ಮರಣೀಯ ದಿನ. ಇಂದು ನನ್ನ ಜೀವನಸಂಧ್ಯೆಯಲ್ಲಿ ಅದನ್ನು ನೆನಪಿಸಿಕೊಂಡಾಗ, ನನ್ನ ಮನಸ್ಸು ಚೇತರಿಸಿಕೊಂಡು ಎದ್ದು ನಿಲ್ಲುವುದು; ಒಂದು ಅಸಾಧಾರಣ ಸುಖಾನುಭವದಿಂದ ಮನಸ್ಸು ತುಂಬಿಕೊಳ್ಳುವುದು.

ಅಂದು ಗಂಗಾಸ್ನಾನ ಮಾಡಿದ ಮೇಲೆ ಅಜ್ಜಿಯೊಂದಿಗೆ ಅಲ್ಲಿಗೆ ನಾನು ಹೋಗಿದ್ದೆ. ಪಕ್ಕದ ಕೋಣೆಯಲ್ಲೇ ಶ್ರೀಮಾತೆ ಕುಳಿತಿದ್ದರು. ಪ್ರಣಾಮ ಮಾಡಿದೆ; ಎಷ್ಟು ಹೊತ್ತು ಹಾಗೆಯೇ ನಮಸ್ಕರಿಸುತ್ತ ಇದ್ದೆನೋ ಗೊತ್ತಿಲ್ಲ. ನನಗರಿವಿಲ್ಲದೇ ನನಗೆ ಆನಂದ ಬಾಷ್ಪಗಳು ಇಳಿದವು— ಅದನ್ನು ನನಗೆ ತಡೆದುಕೊಳ್ಳಲಾಗಲಿಲ್ಲ. ನನಗೆ ಆ ಸಣ್ಣ ವಯಸ್ಸಿನಲ್ಲಿ ಅಷ್ಟೊಂದು ತಿಳುವಳಿಕೆ ಇರಲಿಲ್ಲ.

ಆದರೂ, ಯಾಕೋ ಗೊತ್ತಿಲ್ಲ, ನನಗೆ ಅನ್ನಿಸಿತು — ಅವರ ಪರಿಚಯ ನನಗೆ ಚೆನ್ನಾಗಿ ಇದ್ದಂತೆ, ಉಳಿದ ಎಲ್ಲರಿಗಿಂತಲೂ ಅವರು ನನಗೆ ಆತ್ಮೀಯರು ಎಂಬಂತೆ. ಒಂದು ಕ್ಷಣ ನನಗೆ ಏನೂ ಅರಿವಿಲ್ಲದೆ ಹೋಯಿತು. ಪ್ರಜ್ಞೆ ಮರಳಿದಾಗ ತಿಳಿಯಿತು, ಶ್ರೀಮಾತೆ ಹೇಳುತ್ತಿದ್ದರು, ''ನೀನೇಕೆ ಅಳುತ್ತಿದ್ದೀಯಾಮ್ಮಾ, ನಾನು ಇಲ್ಲೇ ಇದ್ದೇನೆ ನೋಡು.'' ಪ್ರೀತಿಯಿಂದ ಅವರು ನನ್ನ ತಲೆಯನ್ನು ಸವರುತ್ತಿದ್ದರು. ಆ ಅಪೂರ್ವ ಅನುಭವದಿಂದ ನನ್ನ ದೇಹವೆಲ್ಲ ತಣ್ಣಗಾಗಿ ಹೋಯಿತು; ನನ್ನನ್ನು ನಾನೇ ಕಳೆದು ಕೊಂಡಂತೆ. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆ ನನಗೆ ಠಾಕೂರರ ಪ್ರಸಾದ ಕೊಟ್ಟರು. ಬಳಿಕ ನನ್ನ ಪರಿಚಯ ಮಾಡಿಕೊಳ್ಳುವ ಸಲುವಾಗಿ ನನ್ನ ಅಜ್ಜಿಯನ್ನು ಕೇಳಿದರು, ''ಇವಳು ಮಣ್ಣಿನ ಮನೆಯ ಹುಡುಗಿ ಅಲ್ಲವೆ?'' ನಾನು ಯಾರೆಂದು ತಿಳಿದ ನಂತರ, ಒಂದು ದಿನ ಸ್ನಾನ ಮಾಡಿದ ಮೇಲೆ ನನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗಲು ಹೇಳಿದರು. ಆಗ ಅಲ್ಲಿ ಗೋಲಾಪ್ ಮಾ, ಯೋಗಿನ್ ಮಾ ಇದ್ದರು. ಸ್ನಾನ ಮಾಡಿ ಕರೆದುಕೊಂಡು ಹೋಗುವುದು ಎಂಬುದರ ಅರ್ಥವೇನೆಂದು ಅವರಿಗೆ ಗೊತ್ತಿತ್ತು. ಆ ಸಮಯದಲ್ಲಿ ಶ್ರೀಮಾತೆ ಯಾವುದೋ ಕಾರಣಕ್ಕಾಗಿ ಮದುವೆಯಾಗದ ಕನ್ಯೆಯರಿಗೆ ದೀಕ್ಷೆ ನೀಡುತ್ತಿರಲಿಲ್ಲ. ಇದನ್ನು ಅವರು ಶ್ರೀಮಾತೆಯವರಿಗೆ ನೆನಪಿಸಿದಾಗ ಅವರೆಂದರು: ''ಅದು ಇವಳ ವಿಷಯದಲ್ಲಿ ಅನ್ವಯವಾಗದು.'' ಹೀಗೆ ಬಯಸದೇ ಲಭಿಸಿದ ಕೃಪೆಯಿಂದಾಗಿ ನಾನು ಧನ್ಯಳಾದೆ.

ಹೇಳಿದ ದಿನದಂದು ನಾನು ನನ್ನ ಅಧ್ಯಾಪಕರೊಂದಿಗೆ ಬಾಗ್‌ಬಾಜಾರಿನ 'ಉದ್ಬೋಧನ' ವನ್ನು ತಲುಪಿದೆ. ಏನೋ ಕಾರಣದಿಂದ ನಾವು ಅಲ್ಲಿಗೆ ತಲುಪುವುದು ತುಸು ತಡವಾಗಿತ್ತು. ಪೂಜ್ಯ ಶರತ್ ಮಹಾರಾಜರು ತುಂಬಾ ಉದ್ವೇಗದಿಂದ, ಮುಂಭಾಗದ ರಸ್ತೆಯಲ್ಲಿ ಅತ್ತಿತ್ತ ನಡೆದಾಡುತ್ತಿದ್ದರು. ನಾವು ಅಲ್ಲಿಗೆ ತಲುಪಿದಾಗ, ಅವರು ಅಸಮಾಧಾನದಿಂದ ಸರಿಯಾದ ಸಮಯಕ್ಕೆ ತಲುಪದೆ ಇದ್ದುದಕ್ಕಾಗಿ ಮೃದುವಾಗಿ ಬೈದುಬಿಟ್ಟರು. ಶ್ರೀಮಾತೆ ನಮಗೋಸ್ಕರ ಕಾಯುತ್ತಿದ್ದಾರೆಂದೂ ಅವರು ತಿಳಿಸಿದರು. ಅಧ್ಯಾಪಕರು ನಾವು ತಡವಾಗಿ ತಲುಪಿದ್ದಕ್ಕೆ ಕಾರಣವನ್ನು ವಿನಯಪೂರ್ವಕವಾಗಿ ತಿಳಿಸಿದಾಗ ಅವರು ಸಮಾಧಾನಗೊಂಡು, ನನ್ನನ್ನು ಮೇಲಂತಸ್ತಿಗೆ ಕರೆದುಕೊಂಡು ಹೋಗಲು ಹೇಳಿದರು.

ಮೇಲಂತಸ್ತಿಗೆ ಹೋದೆ. ಶ್ರೀಮಾತೆ ಪೂಜೆ ಮಾಡುವ ಆಸನದಲ್ಲಿ ಕುಳಿತಿದ್ದರು. ಅವರ ಪಕ್ಕದಲ್ಲಿ ಇನ್ನೊಂದು ಆಸನವಿತ್ತು. ಮೃದುವಾದ ನೋಟದಿಂದ ಸ್ನೇಹಪೂರ್ಣವಾದ ಆಹ್ವಾನ ನೀಡಿದರು; ಅವರಲ್ಲಿ ಯಾವುದೇ ಅಸಮಾಧಾನವಿರಲಿಲ್ಲ. ನನ್ನ ಎಳೆಯ ಮನಸ್ಸು ಆ ಕ್ಷಣದಲ್ಲೇ ಆನಂದದಿಂದ ತುಂಬಿ ಹೋಯಿತು. ಶ್ರೀಮಾತೆ ಎದ್ದು ಹೋಗಿ ಬಾಗಿಲನ್ನು ಹಾಕಿ ಬಂದರು. ಈಗ ಅಲ್ಲಿ ಬೇರೆ ಯಾರೂ ಇರಲಿಲ್ಲ. ನಾನು ಮತ್ತು ಶ್ರೀಮಾತೆ, ಇಬ್ಬರೇ. ಅವರ ಪಕ್ಕದಲ್ಲಿದ್ದ ಆಸನದಲ್ಲಿ ಕುಳಿತುಕೊಳ್ಳಬೇಕೆಂದು ನನಗೆ ಹೇಳಿ, ಅವರು ಪೂಜೆಯ ಆಸನದಲ್ಲಿ ಕುಳಿತು, ಸ್ವಲ್ಪ ಹೊತ್ತು ಪೂಜೆ ಮಾಡಿದರು. ಅವರ ಪಕ್ಕದಲ್ಲಿ ಕುಳಿತು ನಾನು ಹೀಗೆ ಯೋಚಿಸಿದೆ — 'ಶ್ರೀಮಾತೆ ನನಗೆ ಮಂತ್ರದೀಕ್ಷೆ ನೀಡುತ್ತಾರೆ.' ಆದರೆ ಯಾವ ಮಂತ್ರವನ್ನು ನೀಡುತ್ತಾರೋ! ನನಗೆ ಶ್ರೀರಾಮಕೃಷ್ಣರೆಂದರೆ ತುಂಬಾ ಇಷ್ಟ. ಬೇರೆ ದೇವರ ಮಂತ್ರವನ್ನು ಕೊಟ್ಟರೆ, ಅದರ ಮೇಲೆ ನನಗೆ ಭಕ್ತಿ, ಪ್ರೇಮ ಹುಟ್ಟುವುದೆ? ಅಂತರ್ಯಾಮಿನಿಯಾದ ಜಗನ್ಮಾತೆ ನನ್ನ ಮನಸ್ಸಿನ ಆತಂಕವನ್ನು ಅರಿತಿದ್ದರು. ಪೂಜೆ ಮುಗಿದ ಮೇಲೆ ಅವರು ನನಗೆ ಆಶ್ಚರ್ಯವುಂಟಾಗುವಂತೆ ಹೇಳಿದರು, ''ಅಲ್ಲಮ್ಮಾ, ಠಾಕೂರರನ್ನು ಬಿಟ್ಟು ನಮಗೆ ಇನ್ನೇನಿದೆ? ನೀನು ಯಾವುದನ್ನು ಬಯಸಿದ್ದೀಯೋ, ಆ ಮಂತ್ರವೇ ನಿನಗೆ ಲಭಿಸುವುದು.'' ನಾನು ಆಶ್ಚರ್ಯದಿಂದ ಅವಾಕ್ಕಾದೆ. ಸಾಕ್ಷಾತ್ ಮಹಾಮಾಯೆಯೇ ನನಗೆ ಮಹಾಮಂತ್ರದೊಂದಿಗೆ ದೀಕ್ಷೆ ನೀಡಿದರು. ಪ್ರೀತಿಯಿಂದ ಅವರು ಕರಜಪ ಮಾಡುವ ವಿಧಾನವನ್ನು ನನಗೆ ಕಲಿಸಿದರು. ನನ್ನ ಕೈಗೆ ಸ್ವಲ್ಪ ಹೂಗಳನ್ನು ಕೊಟ್ಟು, ಗುರುಪೂಜೆ ಮಾಡಲು ಹೇಳಿದರು. ಹೇಗೆ ಪೂಜೆ ಮಾಡಬೇಕು ಎಂದು ನನಗೆ ಸ್ವಲ್ಪವೂ ಗೊತ್ತಿರಲಿಲ್ಲ. ನಾನು ಚಡಪಡಿಸುತ್ತಿದ್ದುದನ್ನು ಕಂಡು ಅವರು ತಮ್ಮ ಪಾದಗಳನ್ನು ಮುಂದಕ್ಕೆ ಚಾಚಿ, ಅವುಗಳ ಮೇಲೆ ಪುಷ್ಪಾರ್ಚನೆ ಮಾಡಲು ಹೇಳಿದರು. ನಾನು ತುಂಬುಹೃದಯದಿಂದ ಪುಷ್ಪಾರ್ಚನೆ ಮಾಡಿದೆ. ನನ್ನ ಕೈಗೆ ಅಳಲೆಕಾಯಿಯೊಂದನ್ನು ಕೊಟ್ಟು, ಗುರುದಕ್ಷಿಣೆ ನೀಡಲು ಹೇಳಿದರು. ಎರಡೂ ಕೈಗಳಿಂದ ಅದನ್ನು ಶ್ರೀಮಾತೆ ಸ್ವೀಕರಿಸಿದರು. ಮತ್ತೊಮ್ಮೆ ನಾನು ಕೃತಾರ್ಥಳಾದೆ. ಕೆಳ ಅಂತಸ್ತಿಗೆ ಹೋಗಿ ಪ್ರಸಾದ ಸ್ವೀಕರಿಸಲು, ಮನೆಗೆ ಹೋಗುವ ಮುನ್ನ ಮತ್ತೊಮ್ಮೆ ತಮ್ಮನ್ನು ಭೇಟಿಯಾಗಿ ಹೋಗಲು ಅವರು ಹೇಳಿದರು.

ಪ್ರಸಾದ ಸ್ವೀಕರಿಸಿದ ನಂತರ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದೆವು. ಆಗ ಶ್ರೀಮಾತೆ ಕೂಡ ವಿಶ್ರಾಂತಿ ಪಡೆಯುತ್ತಿದ್ದರು. ಅವರ ದರ್ಶನ ಮಾಡುವ ಸಮಯವಾದಾಗ, ಉಳಿದವರೆಲ್ಲರ ಜೊತೆಗೆ ನಾನೂ ಮೇಲಂತಸ್ತಿಗೆ ಹೋದೆ. ನಾನು ಹೃದಯಪೂರ್ವಕವಾಗಿ ಪ್ರಣಾಮ ಮಾಡಿದೆ. ನನ್ನನ್ನು ನಡುನಡುವೆ ತಮ್ಮ ಬಳಿಗೆ ಕರೆದುಕೊಂಡು ಬರಬೇಕೆಂದು ಶ್ರೀಮಾತೆ ನನ್ನ ಅಧ್ಯಾಪಕರಿಗೆ ಹೇಳಿದರು. ಹೋಗುವ ಮುನ್ನ ಶರತ್ ಮಹಾರಾಜರನ್ನು ಕಂಡು ಹೋಗಬೇಕೆಂದು ಕೂಡ ಅವರು ಸೂಚನೆಯಿತ್ತರು. ಪೂಜ್ಯ ಶರತ್ ಮಹಾರಾಜರಿಗೆ ಪ್ರಣಾಮ ಮಾಡಿದಾಗ, ಅವರು ನನಗೆ ಶ್ರೀಮಾತೆಯವರ ಒಂದು ಸಣ್ಣ ಫೋಟೋವನ್ನು ಕೊಟ್ಟು, ''ಇದನ್ನು ನಿನ್ನ ಹೃದಯದಲ್ಲಿ ಇಟ್ಟು ತೆಗೆದುಕೊಂಡು ಹೋಗು, ಯಾರಿಗೂ ತೋರಿಸಬೇಡ'' ಎಂದರು. ಶ್ರೀಮಾತೆಯವರೇ ಅದನ್ನು ಕೊಡಲು ಸೂಚನೆ ನೀಡಿದ್ದಿರಬೇಕು ಎಂದು ನನಗೆ ಅನ್ನಿಸಿತು. ತುಂಬುಹೃದಯದಿಂದ ನಾನು ಮನೆಗೆ ಮರಳಿದೆ.

ಇದಾದ ನಂತರ ಬಾಗ್‌ಬಾಜಾರ್‌ನಲ್ಲಿ ಶ್ರೀಮಾತೆಯವರ ದರ್ಶನ ಪಡೆಯುವ, ಅವರಿಗೆ ಪ್ರಣಾಮ ಮಾಡುವ ಸೌಭಾಗ್ಯ

ಕೆಲವು ಬಾರಿ ನನಗೆ ಬಂದೊದಗಿತ್ತು. ಅವರ ನೋಟದಿಂದಲೇ ಒಂದು ಬಗೆಯ ಪರಿಶುದ್ಧ ಪ್ರೀತಿ ನಮ್ಮ ಹೃದಯವನ್ನೆಲ್ಲ ವ್ಯಾಪಿಸಿಬಿಡುತ್ತಿತ್ತು. ಅವರು ಯಾರನ್ನಾದರೂ ಕರೆದಾಗ ಅದರಲ್ಲಿ ಎಂತಹ ಆತ್ಮೀಯತೆಯಿರುತ್ತಿತ್ತು! ಅದೇ ರೀತಿ, ಅವರ ಎರಡು ಪಾದಪದ್ಮಗಳು! ಎಷ್ಟೊಂದು ಕೋಮಲ; ಗುಲಾಬಿ ಬಣ್ಣದ ಪ್ರಭೆ ಅವುಗಳಲ್ಲಿ! ಅವರಿಗೆ ಬಾಯಿಬಿಟ್ಟು ಏನನ್ನೂ ಹೇಳಬೇಕಾಗುತ್ತಿರಲಿಲ್ಲ; ಅವರು ಅಂತರ್ಯಾಮಿನಿ — ಎಲ್ಲವನ್ನೂ ಅರಿತುಕೊಂಡುಬಿಡುತ್ತಿದ್ದರು. ಅವರ ಕಾಲ ಬಳಿ ಕುಳಿತು, ಅವರ ಬಾಯಿಯಿಂದಲೇ, ಪುಸ್ತಕದಲ್ಲಿ ಓದಿದ ಡಕಾಯಿತನ ಘಟನೆಯನ್ನು ಕೇಳಬೇಕೆಂದು ನನಗೆ ಆಸೆಯುಂಟಾಯಿತು. ಡಕಾಯಿತನು ತಡೆಗಟ್ಟಿದ ಶ್ರೀಮಾತೆ ಇವರೇ ಏನು? ಅವನಿಗೆ ಶ್ರೀಮಾತೆ ಕಾಳೀರೂಪವನ್ನು ತೋರಿಸಿಕೊಟ್ಟು, ಅವನನ್ನು ಕೃತಾರ್ಥನನ್ನಾಗಿಸಿದ್ದರು. ಶ್ರೀಮಾತೆ ಈ ಬಗ್ಗೆ ಹೇಳತೊಡಗಿದರು: ''ಹೌದಮ್ಮಾ, ನಾನೇ ಆ ಡಕಾಯಿತನ ಮಗಳು. ನಿಮ್ಮ ಠಾಕೂರರು ಆ ಡಕಾಯಿತನ ಮೇಲೆ ಎಷ್ಟೊಂದು ವಿಶ್ವಾಸವಿಟ್ಟುಕೊಂಡಿದ್ದರು!'' ಶ್ರೀಮಾತೆ ಸ್ವತಃ ತಾವೇ ತಮ್ಮ ನಿಜರೂಪವನ್ನು ತಿಳಿಸಿಕೊಡದಿದ್ದರೆ, ಅದನ್ನು ತಿಳಿಯುವ ಮಾರ್ಗ ಬೇರೆ ಯಾವುದೂ ಇಲ್ಲ. ಅಷ್ಟೊಂದು ಸರಳ, ಸಹಜ ಹಾಗೂ ಸಾಮಾನ್ಯ ವ್ಯಕ್ತಿಯಂತಿದ್ದರು ಅವರು.

ನನ್ನ ವೈಯಕ್ತಿಕ ಜೀವನದಲ್ಲಿ ನಾನು ಅವರ ಅಹೇತುಕ ಕೃಪೆಯನ್ನು ಅನುಭವಿಸಿದ್ದೇನೆ; ಈಗಲೂ ಅನುಭವಿಸುತ್ತಿದ್ದೇನೆ. ಮದುವೆಯಾಗಲು ನನಗೆ ಸ್ವಲ್ಪವೂ ಇಷ್ಟವಿರಲಿಲ್ಲ. ನನ್ನ ತಂದೆಗೆ ನನ್ನ ಮೇಲೆ ತುಂಬಾ ಪ್ರೀತಿಯಿತ್ತು. ಅದೇಕೋ ತಿಳಿಯದು, ಇತರ ಸೋದರ, ಸೋದರಿಯರಿಗಿಂತ ತಂದೆಯ ಮೇಲೆ ನನಗೇ ಹೆಚ್ಚಿನ ಅಧಿಕಾರವಿತ್ತೆಂದು ನನಗೆ ಅನ್ನಿಸುತ್ತಿತ್ತು. ಅವರು ನನ್ನ ಅಭಿಪ್ರಾಯವನ್ನು ಗೌರವಿಸುತ್ತಿದ್ದರು. ಎಂದಿಗೂ ಬಲವಂತವಾಗಿ ಏನನ್ನೂ ನನ್ನ ಮೇಲೆ ಹೇರುತ್ತಿರಲಿಲ್ಲ. ಆ ದಿನಗಳಲ್ಲಿ ಒಬ್ಬಾಕೆ ಹೆಣ್ಣುಮಗಳು ಮದುವೆಯಾಗದೆ ಕನ್ಯೆಯಾಗಿಯೇ ಉಳಿಯುವುದನ್ನು ಊಹಿಸಿಕೊಳ್ಳುವುದೂ ಸಾಧ್ಯವಿರುತ್ತಿರಲಿಲ್ಲ. ನಮ್ಮ ಕುಟುಂಬದ ಹಿರಿಯರು ಇದಕ್ಕಾಗಿ ಸಂದೇಹಗೊಂಡು ನನ್ನ ತಂದೆಯನ್ನು ಬಯ್ಯುತ್ತಿದ್ದರೂ, ಅವರು ಸ್ವಲ್ಪವೂ ಚಿಂತೆ ಮಾಡಿಕೊಳ್ಳದೆ, ನನ್ನ ಭಾವನೆಯನ್ನು ಮನ್ನಿಸುತ್ತಿದ್ದರು. ಮುಂದೆ ಎಲ್ಲರೂ ಆತಂಕಕ್ಕೊಳಗಾದ ಕಾರಣ, ನನ್ನನ್ನು ಬಾಗ್‌ಬಜಾರ್‌ಗೆ ಕರೆದುಕೊಂಡು ಹೋಗಿ, ಶ್ರೀಮಾತೆಯವರ ಮುಂದೆ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಎಂದು ತೀರ್ಮಾನವಾಯಿತು. ತಂದೆ ಈ ವಿಷಯವನ್ನು ನನಗೆ ತಿಳಿಸಿದಾಗ, ನನಗಿಷ್ಟವಿಲ್ಲದಿದ್ದರೂ ಅದನ್ನು ನಾನು ಒಪ್ಪಿಕೊಳ್ಳಬೇಕಾಯಿತು. ಆಗ ನಾನು ಸಾಕಷ್ಟು ವಯಸ್ಸಿಗೆ ಬಂದಿದ್ದೆ — ಬಹುಶಃ ಹದಿನಾರು-ಹದಿನೇಳು ಆಗಿದ್ದಿರಬಹುದು. ಆ ಕಾಲದಲ್ಲಿ ಬಹುತೇಕ ನನ್ನನ್ನು ಜಾತಿಭ್ರಷ್ಟಗೊಳಿಸುವುದು ಮಾತ್ರವೇ ಉಳಿದಿತ್ತು.

ಶ್ರೀಮಾತೆ ಸಮಾಧಾನದಿಂದ ನನ್ನ ಇಚ್ಛೆಯನ್ನು ಕೇಳಿ ತಿಳಿದರು. ಅನಂತರ ಸ್ವಲ್ಪ ಹೊತ್ತು ಸುಮ್ಮನಿದ್ದರು. ಬಳಿಕ ಅವರೆಂದರು: ''ನೋಡು, ನೀನು ಸಂಸಾರ ಮಾಡಬೇಕಾಗುತ್ತದೆ. ಯಾರೊಂದಿಗೆ ಸಂಸಾರ ಮಾಡುತ್ತೀಯೋ, ಅವನು ಕೂಡ ನಿನ್ನಂತಹ ಭಾವವನ್ನೇ ಹೊಂದಿರುತ್ತಾನೆ.'' ಶ್ರೀಮಾತೆ ತನ್ನ ಪೆದ್ದು ಹುಡುಗಿಗೋಸ್ಕರ ತಕ್ಕ ವರನನ್ನೂ ಆಯ್ಕೆ ಮಾಡಿಬಿಟ್ಟಿದ್ದಾರೇನು? ಮುಂದಿನ ಜೀವನದಲ್ಲಿ ಯಾರೊಂದಿಗೆ ಸಹಬಾಳ್ವೆ ನಡೆಸುವ ಭಾಗ್ಯ ನನ್ನದಾಯಿತೋ, ಅವರನ್ನು ಕುರಿತು ಸಂಕ್ಷಿಪ್ತವಾಗಿ ಇಲ್ಲಿ ಬರೆಯುವುದು ಅಸಮಂಜಸವಾಗದು ಎನಿಸುತ್ತದೆ. ಅವರು ದಿವಂಗತ ಖಗೇಂದ್ರಕೃಷ್ಣ ರಾಯ್. ಬೇಲೂರು ಮಠದಲ್ಲಿ ಹಿರಿಯ ಸಂನ್ಯಾಸಿಗಳ ನಡುವೆ 'ಖಗೇನ್ ಬಾಬು' ಎಂದೇ ಪರಿಚಿತರು. ಮುರ್ಶಿದಾಬಾದ್‌ನ ಬಹರಂಪುರದಲ್ಲಿ ಅವರ ಬಾಲ್ಯ ಹಾಗೂ ಯೌವನ ಕಳೆಯಿತು. ಪಕ್ಕದಲ್ಲೇ ಸಾರಗಾಛಿ ಆಶ್ರಮವಿತ್ತು. ಸ್ವಾಮಿ ಅಖಂಡಾನಂದಜಿ ಅಲ್ಲಿಂದಲೇ ತಮ್ಮ ಸೇವಾಕಾರ್ಯವನ್ನು ಆರಂಭಿಸಿದರು. ಅವರಿಂದ ಆಕರ್ಷಿತರಾದ ಯುವಕರು ಸಮೀಪದ ಪ್ರದೇಶಗಳಿಂದ ಬಂದರು; ಠಾಕೂರರ, ಸ್ವಾಮಿಜಿಯವರ ಭಾವಧಾರೆಯಿಂದ ಪ್ರಭಾವಿತರಾದರು. ಇವರ ಮಧ್ಯ ಇದ್ದವರು ಖಗೇನ್ ಬಾಬು. ಅವರನ್ನು ಬಾಗ್‌ಬಜಾರಿನಲ್ಲಿದ್ದ ಶ್ರೀಮಾತೆಯವರ ಬಳಿಗೆ ಕಳುಹಿಸಿಕೊಟ್ಟವರೇ ಅಖಂಡಾನಂದಜಿ. ಅವರೂ ಶ್ರೀಮಾತೆಯವರ ಕೃಪೆಗೆ ಪಾತ್ರರಾಗಿ, ಅವರಿಂದ ಮಂತ್ರದೀಕ್ಷೆ ಪಡೆದು ಧನ್ಯರಾದರು. ಇದು ಒಂದು ಪವಾಡವಲ್ಲವೆ? — ಎಂದು ನಾನು ಈಗ ಭಾವಿಸುತ್ತೇನೆ. ಇದು ಅವರ ಕೃಪೆಯಿಂದ ಮಾತ್ರವೇ ಸಾಧ್ಯವಾದೀತು. *

* ಉದ್ಬೋಧನ ಸಂ.೬೨, ಸಂಚಿಕೆ ೮. ಭಾದ್ರಪದ, ೧೩೬೭ (ಬಂಗಾಳಿ ವರ್ಷ)

> ''ಹೃದಯವಿಲ್ಲದೆ ಹೋದರೆ ಎಲ್ಲವೂ ವ್ಯರ್ಥ. ಹೃದಯ ವಿಶಾಲವಾಗದಿದ್ದರೆ ಏನೂ ಲಭಿಸದು. ಕಣ್ಣು ಮುಚ್ಚಿ ಸುಮ್ಮನೆ ಕುಳಿತಿದ್ದರಿಂದ ಯಾವ ಫಲವೂ ಸಿಗಲಾರದು. ಅದರಿಂದ ಭಗವಂತನ ಸಾಕ್ಷಾತ್ಕಾರವೂ ದೊರಕಲಾರದು.
>
> ಪ್ರಾರ್ಥನೆ ಮಾಡಬೇಕು. ದೇವರ ನಾಮಜಪದೊಂದಿಗೆ ಪ್ರಾರ್ಥನೆಯನ್ನೂ ಮಾಡುತ್ತ ಹೋಗಬೇಕು. ಧ್ಯಾನವೆಂಬುದು ದೂರದ ಮಾತು.
>
> ಮನಸ್ಸಿನ ಸಹಜ ಪ್ರವೃತ್ತಿ ಇಂದ್ರಿಯಸುಖ ನೀಡುವ ವಿಷಯಗಳ (ಶಬ್ದ, ಸ್ಪರ್ಶ, ರೂಪ, ರಸ, ಗಂಧ) ಕಡೆಗೆ. ಅವುಗಳನ್ನು ನಿನ್ನ ಇಷ್ಟದೇವತೆಯೊಂದಿಗೆ ಸುಖಿಸು. ಆಗ ಸುಖವು ತನ್ನ ಪರಿಣಾಮವನ್ನು ಕಳೆದುಕೊಳ್ಳುವುದು. ಅದು ದಿವ್ಯತೆಗೆ ಒಳಗಾಗುವುದು.''
>
> — ಸ್ವಾಮಿ ಅಖಂಡಾನಂದ